Mr. SPEAKER.—He must give them all particulars. Let him mention one are to instances.

Sri S. SIVAPPA.—By the information elicited, it has come to the notice of the Government that there is enough misuse.

Scholarship Committees of Bangalore District.

*Q.—602. **Sri J. SRINIVASA REDDY** (Uttarahalli).—

Will the Government be pleased to state.—

(*a*) the names of Members of the various Committees of Bangalore District (Talukwise) for the award of Scholarships to students studying in Middle and High Schools for the year 1962-63;

(*b*) the basis on which these Committees were constituted?

A.—**Sri S. R. KANTHI** (Minister for Education).—

(*a*) List is placed on the Table of the House. (Placed in the Mysore Legislative Libray—*vide* No. 20./L.A. Bud. 63).

(*b*) Representation is given to the sections of people in the locality interested in Education.

ಶ್ರೀ ಜೆ. ಶ್ರೀನಿವಾಸರೆಡ್ಡಿ.—ಸೌತ್ ತಾಲ್ಲೂಕಿನಲ್ಲಿ ಇಲ್ಲದೆ ಇರತಕ್ಕಂಥ ಶ್ರೀ ಕೃಷ್ಣಪ್ಪನವರನ್ನು ಹೈಸಿಡೆಂಟಾಗಿ ಮಾಡಿರುವುದಕ್ಕೆ ಕಾರಣವೇನು? ಅವರು ಸಿಟಿಯಲ್ಲಿರುವವರು.

† ಶ್ರೀ ಎಸ್. ಆರ್. ಕಂಠಿ.—ಇಲ್ಲಿ ಎಜುಕೇಷನ್ ಡಿಪಾರ್ಟ್‌ಮೆಂಟ್ ಮಾತು ಹೇಳುವುದಾದರೆ, ಬೆಂಗಳೂರು ನಾರ್ತ್ ಸಿಟಿಯೊಳಗೆ ಬರುತ್ತದೆ. ಬೆಂಗಳೂರು ನಾರ್ತ್, part of city ಗೆ ಬರುತ್ತದೆ. ಬೆಂಗಳೂರು ಸಿಟಿಗೆ ಬರುವುದರಿಂದ ಆ ಪ್ರಕಾರ ಮಾಡಿದೆ.

Sri C. J. MUCKANNAPPA.—What part of the City is included in South Taluk?

Sri S. R. KANTHI.—I cannot give off-hand reply. That is a matter of detail.

Sri C. J. MUCKANNAPPA.—Is it not a fact that Sri Krishnappa, a Member of this Hon'ble House is not living within the limits of that taluk?

Sri S. R. KANTHI.—I cannot say off-hand.

Sri S. SIVAPPA.—Who is the Member who is elected from Bangalore South constituency?

Sri S. R. KANTHI.—I do not know, Sir.

Sri S. SIVAPPA.—When there was an MLA living in the same constituency, may I know what was the compelling reason to appoint only Mr. Krishnappa? Is it not a fact that it is because he belongs to the Ruling Party?

Sri S. R. KANTHI.—Sir, there cannot be two chairmen.

Sri G. V. GOWDA.—Has it come to the notice of the Government several chairmen that are appointed are not residents in that particula taluk or constituency?

---

† Indicates that the remarks or speeches have not been revised by the member concerned.

Sri S. R. KANTHI.—If the Hon'ble Members point out particular instances, I can look into them.

ಶ್ರೀ ಜಿ. ರಾಮೇಗೌಡ.—ಸರ್ಕಾರದ ಸರ್‌ಕ್ಯುಲರ್ ಪ್ರಕಾರ ತಾಲ್ಲೂಕಿನ ಎಂ. ಎಲ್. ಎ. ಗಳು M.L.C. ಗಳು ಕಮಿಟಿಯಲ್ಲಿ ಇರಬೇಕಲ್ಲವೇ ?

Sri S. R. KANTHI.—South is part of Sri. Krishnappa's Consitituency.

ಶ್ರೀ ಜಿ. ರಾಮೇಗೌಡ.—ಸೌತ್ ತಾಲ್ಲೂಕಿನ ಎರಡು ಎಂ. ಎಲ್. ಎ. ಗಳನ್ನು ಸೇರಿಸಿಲ್ಲ. ಏಕೆ ?

ಶ್ರೀ ಎಸ್. ಆರ್. ಕಂಠಿ.—ಅದನ್ನು ಮೊದಲೇ ಗಮನಕ್ಕೆ ತಂದಿದ್ದರೆ ಸರಿಮಾಡುತ್ತಿದ್ದೆ. ಒಮ್ಮೊಮ್ಮೆ ತಪ್ಪು ಆಗಿಹೋಗುತ್ತದೆ.

ಶ್ರೀ ಸಿ. ಆರ್. ರಂಗೇಗೌಡ.—ಬೆಂಗಳೂರು ಸಿಟಿ ತಾಲ್ಲೂಕಿನಲ್ಲಿ ಒಬ್ಬ ಹರಿಜನ ನಪನ್ಯರನ್ನು ಎರಡು ಕಡೆ ಸೇರಿಸಿದ್ದೀರಿ. ಹಾಗೆಯೇ ರಾಮನಗರದ ಒಂದೇ ಮನೆಯವರನ್ನು ಎರಡಕ್ಕೆ ಸೇರಿಸಿದ್ದೀರಿ. ತಾವು ಅನುಸರಿಸುವ ನೀತಿ ಏನು ?

ಶ್ರೀ ಎಸ್. ಆರ್. ಕಂಠಿ.—ಹಾಗೆ ಆಗಿದ್ದು, ರೆಕ್ಟಿಫೈ ಮಾಡುವುದು ಇದ್ದರೆ ಮಾಡೋಣ. ಅದರಲ್ಲಿ ಸಣ್ಣ ಸಣ್ಣ ತಪ್ಪಾಗುತ್ತವೆ ಅಂತ ಹೇಳಿದ್ದೇನೆ. ಕೆಲವು ಪ್ರಿನ್ಸಿಪಲ್ಸ್‌ಗಳ ಮೇಲೆ ಮಾಡಿದ್ದೇವೆ.

ಶ್ರೀ ಜೆ. ಶ್ರೀನಿವಾಸರೆಡ್ಡಿ.—ಅನೇಕಲ್ ತಾಲ್ಲೂಕಿನಲ್ಲಿ ಶ್ರೀ ರಂಗಪ್ಪರೆಡ್ಡಿ, ex-M.L.A. ಅಂತ ಇದೆ. ಅವರು ಯಾವಾಗ M. L. A. ಆಗಿದ್ದರು ?

ಶ್ರೀ ಎಸ್. ಆರ್. ಕಂಠಿ.—ಶ್ರೀ ರಂಗಪ್ಪರೆಡ್ಡಿ M. L. A. ಆಗಿದ್ದರೋ ಇಲ್ಲವೋ ಗೊತ್ತಿಲ್ಲ. ಆಗಿದ್ದರು ಅಂತ ಶ್ರೀ ಕೃಷ್ಣಪ್ಪನವರು ಹೇಳುತ್ತಾ ಇದ್ದಾರೆ.

Sri S. SIVAPPA.—Sir, there are clear instructions from the Government to include the MLA or MLC of that area in the Scholarship Committee. What is the reason for committing this grave error for omitting an MLA in the Scholarship Committee ? Does it not speak of the inefficiency of the Education Department ?

ಶ್ರೀ ಎಸ್. ಆರ್. ಕಂಠಿ.—ಬಹಳ ದೂರ ಹೋಗಿಬಿಟ್ಟಿರಿ. ಏಕೆಂದರೆ ನಾವು 178 ಕಮಿಟಿ ಗಳನ್ನು ಮಾಡುತ್ತಾ ಇದ್ದೇವೆ. ಎಷ್ಟೇ ನಾವು ಕಣ್ಣಿನಲ್ಲಿ ಕಣ್ಣು ಇಟ್ಟುಕೊಂಡು ಮಾಡಿದರೂ ಎಲ್ಲಿಯೋ ಸ್ವಲ್ಪ ತಪ್ಪು ಆಗುತ್ತದೆ. ಕೆಲವು ಕಡೆ ಹಾಗಾಗಿದುದ್ದನ್ನು ಗಮನಕ್ಕೆ ತಂದಿದ್ದಾರೆ, ತಕ್ಷಣವೇ ನಾನು ಕ್ರಮ ತೆಗೆದುಕೊಂಡಿದ್ದೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಒಮ್ಮೊಮ್ಮೆ ತಪ್ಪಾಗುತ್ತದೆ ಎಂದು ಹೇಳಿದಿರಿ. ಒಮ್ಮೊಮ್ಮೆ ತಪ್ಪಾಗಿರತಕ್ಕ ಸಂದರ್ಭ ಎಷ್ಟು ?

1-30 P.M.

ಶ್ರೀ ಎಸ್. ಆರ್. ಕಂಠಿ.—ಒಮ್ಮೊಮ್ಮೆ ಎಂದರೆ ಬಹಳ ಜಾಸ್ತಿ ಎಂದು ಅವರಿಗೆ ಗೊತ್ತಿರ ಬಹುದು. ಆ ರೀತಿ ನನಗೆ ಗೊತ್ತಿಲ್ಲ.

ಶ್ರೀ ಬಿ. ನಂಜಪ್ಪ.—ಬೆಂಗಳೂರು ಸಿಟಿ ಏರಿಯಕ್ಕೆ ಕಮಿಟಿ ಯಾವುದೂ ಇಲ್ಲವೇ ?

ಶ್ರೀ ಎಸ್. ಆರ್. ಕಂಠಿ.—ಆಗಲೇ ಹೇಳಿದೆ ಬೆಂಗಳೂರು ಸಿಟಿಗೆ ಎರಡು ಭಾಗ ಇದೆ, ಒಂದು ನಾರ್ತ್, ಒಂದು ಸೌತ್. ಇದು ರೂರಲ್ ಏರಿಯದಲ್ಲಿ ಸೇರುತ್ತದೆ.

Sri B. NANJAPPA.—May I know why you have not included any of the members in Bangalore City ?

Mr. SPEAKER.—It has been mentioned already ; The Hon'ble Member may write to him.

ಶ್ರೀ ಎಸ್. ಆರ್. ಕಂಠಿ.—ನಂಜಪ್ಪನವರೂ ಇದ್ದಾರೆ ಎಂಬುದು ನನಗೆ ಗೊತ್ತಿದೆ.

ಶ್ರೀ ಜಿ. ವಿ. ಗೌಡ.—ಇದಕ್ಕಿಂತ ಹಿಂದೆ ಸ್ಕಾಲರ್‌ಷಿಪ್ ಯಾವ ರೀತಿ ವಿತರಣೆಯಾಗುತ್ತಾ ಇತ್ತು ? ಈಗ ಈ ರೀತಿ ಕಮಿಟಿ ಮಾಡಿ ಇಷ್ಟೊಂದು ಅಪಾದನೆಗೆ ಅವಕಾಶ ಮಾಡಿದ್ದೀರಿ ?

ಶ್ರೀ ಎಸ್. ಆರ್. ಕಂಠಿ. —ಅಪಾದನೆ ಏನೂ ಇಲ್ಲ. ಎಲ್ಲಾ ಚೆನ್ನಾಗಿದೆ. ಸುಮ್ಮನೆ ಅಪಾದನೆ ಎಂದು ಹೇಳುತ್ತಾ ಇದ್ದೀರಿ. ಅದನ್ನು ನಾನು ಒಪ್ಪುವುದಿಲ್ಲ.

ಶ್ರೀ ಜಿ. ವಿ. ಗೌಡ. —ನ್ಯಾಷನಲ್ ಡಿಫೆನ್ಸ್ ಫಂಡಿಗೆ ಸಾವಿರ ರೂಪಾಯಿ ಕೊಟ್ಟಿರತಕ್ಕವರ ಮಕ್ಕಳಿಗೆ ಸ್ಕಾಲರ್‌ಷಿಪ್ ಕೊಟ್ಟಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಆರ್. ಕಂಠಿ.—ಒಂದು ತಿಂಗಳಿಗೆ 6 ರೂಪಾಯಿ, 10 ತಿಂಗಳು ಕೊಡುತ್ತಾರೆ. ಒಟ್ಟು 60 ರೂಪಾಯಿ ಆಗುತ್ತದೆ. 60 ರೂಪಾಯಿ ಸ್ಕಾಲರ್‌ಷಿಪ್ ತೆಗೆದುಕೊಳ್ಳಬೇಕೆಂದು ಒಂದು ಸಾವಿರ ರೂಪಾಯಿ ಯಾರು ಕೊಡುತ್ತಾರೆ ?

ಶ್ರೀ ಎಸ್. ವಿ ರಾಮೇಗೌಡ.—1,200 ರೂಪಾಯಿ ವರಮಾನ ಇರುವವರಿಗೆ ಸ್ಕಾಲರ್‌ಷಿಪ್ ಕೊಡಕೂಡದು ಎಂದು ನಿಗದಿ ಮಾಡಿದ್ದರೂ ಸಹ ಕಮಿಟಿಯವರು ತಿರುಗಿ ಅಂತಹವರಿಗೇ ಮಂಜೂರು ಮಾಡಿಲ್ಲವೆ ?

ಶ್ರೀ ಎಸ್. ಆರ್. ಕಂಠಿ.—ನಿರ್ದಿಷ್ಟವಾಗಿ ಹೇಳಿದರೆ ನೋಡಿಸುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸೌತ್ ತಾಲ್ಲೂಕು ಸ್ಕಾಲರ್‌ಷಿಪ್ ಕಮಿಟಿಯಲ್ಲಿ ಕನಕಪುರದ ಒಬ್ಬರನ್ನು ಹಾಕಿದ್ದೀರಿ, ಇದರ ಔಚಿತ್ಯವೇನು ?

ಶ್ರೀ ಎಸ್. ಆರ್. ಕಂಠಿ.—ಅವರು ಇಲ್ಲಿ ವಾಸಮಾಡುತ್ತಾ ಇದ್ದರು. ಅದಕ್ಕೆ ಹಾಕಿದ್ದೇವೆ.

Sri GANJI VEERAPPA.—Has it not come to the notice of the Government that in cases where scholarships had been awarded to students whose parents' income was more than Rs. 1,200, they were subsequently cancelled ?

ಶ್ರೀ ಎಸ್. ಆರ್. ಕಂಠಿ.—ಕ್ಯಾನ್ಸಲ್ ಮಾಡಿದ್ದೇವೆ. ಇನ್ನೂ ಕೆಲವು ಇದ್ದರೆ ಕ್ಯಾನ್ಸಲ್ ಮಾಡುತ್ತೇವೆ.

ಶ್ರೀ ಜಿ. ವಿ. ಗೌಡ.—ಸ್ಕಾಲರ್‌ಷಿಪ್ ಕಮಿಟಿ ರಚನೆ ಮಾಡಬೇಕಾದರೆ ಜಿಲ್ಲಾ ವಿದ್ಯಾಧಿಕಾರಿಗಳಿಗೆ ಕಮಿಟಿ ರಚನೆ ಮಾಡತಕ್ಕ ಅಧಿಕಾರ ಕೊಡುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಅದು ಹೇಗೆ ಕೊಡುವುದಕ್ಕೆ ಆಗುತ್ತದೆ ? ತಾವು ಹೇಳುವುದು ಅಭಿಪ್ರಾಯ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಏನಾದರೂ ಮಾಡಿ ಡಿ. ಇ. ಓ. ಗಳಿಗೆ ಅಂಥಾ ಅಧಿಕಾರ ಕೊಡುವುದರಿಂದ ಈ ಮಹತ್ತರವಾದ ಪ್ರಶ್ನೆ ಬಗೆಹರಿಯುತ್ತದೆ ಅಲ್ಲವೇ ?

ಶ್ರೀ ಎಸ್. ಆರ್. ಕಂಠಿ.—ಕಮಿಟಿಯವರು ಕೊಟ್ಟರೇ ಇಷ್ಟು ತಕರಾರು ಮಾಡುತ್ತೀರಿ. ತಾವು ಹೇಳುವಂತೆ ಡಿ. ಇ. ಓ. ಗೆ ಈ ಅಧಿಕಾರ ಕೊಟ್ಟರೆ ಅವರು ನೌಕರಿ ಬಿಟ್ಟು ಓಡಿ ಹೋಗುತ್ತಾರಷ್ಟೆ.

ಶ್ರೀ ಟಿ. ಮಾದಯ್ಯಗೌಡ.—ಎಷ್ಟು ವರ್ಷಕ್ಕೆ ಒಂದು ಸಲ ಕಮಿಟಿ ರಚನೆ ಮಾಡುತ್ತೀರಿ ?

ಶ್ರೀ ಎಸ್. ಆರ್. ಕಂಠಿ.—ಒಂದೇ ವರ್ಷಕ್ಕೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಕನಕಪುರದಲ್ಲಿ, ಶ್ರೀಮಾನ್ ವೆಂಕಟೇಗೌಡರಿಗೆ ಹೇಳಿದಿರಿ, ಅತಿ ಸುಂದರವಾಗಿ, ಸರ್ವಾಂಗ ಸುಂದರವಾಗಿ ನಡೆಯುತ್ತಿದೆ ಎಂದು, ಸರ್ವಾಂಗ ಸುಂದರವಾಗಿ ನಡೆದು ವ್ಯವಸ್ಥೆಯಾಗಿರತಕ್ಕ ಆ ಸ್ಕಾಲರ್‌ಷಿಪ್ ಕಮಿಟಿಯಲ್ಲೂ ಕೂಡ ತಕರಾರು ಬಂದು ಹೊಡೆದಾಟ, ಬಡಿದಾಟ ಆಗಿರುವುದು ತಮಗೆ ಗೊತ್ತೇ ?

ಶ್ರೀ ಎಸ್. ಆರ್. ಕಂಠಿ.—ಅವರು ಸರ್ವಾಂಗಸುಂದರ, ಹಾಗೆ ಹೀಗೆ ಅಂದರು. ಅದು ಅಷ್ಟು ಸರಿಕಾಣುವುದಿಲ್ಲ. ಸರಿಯಾಗಿ ನಡೆದಿದೆ. 178 ತಾಲ್ಲೂಕುಗಳಲ್ಲಿ ಎಲ್ಲಾ ಕಡೆಯಲ್ಲೂ ತಕರಾರು ಬಂದಿಲ್ಲ. ಒಂದೆರಡು ಕಡೆ ಬಂದಿದೆ.

Extending the benefits of Pay Revisions of 1957 and 1961 to the Market Superintendents working in Gulbarga Division.

*Q.—66. Sri J. P. SARWESH (Serum).—

Will the Government be pleased to state :—

the steps taken by Government to extend the benefits of pay revisions ordered in 1957 and 1961 to the Market Superintendents working in Gulbarga Division ?